ಸದರಿ ಅವಧಿಯನ್ನು ವಿಸ್ತರಿಸಬೇಕಾದಲ್ಲಿ ಪುನ: ಕರ್ನಾಟಕ ಭೂ ಕಂದಾಯ ಕಾಯಿದೆ 1964 ಕ್ಕೆ ಸೂಕ್ತ ತಿದ್ದುಪಡಿಯನ್ನು ವಿಧಾನಸಭೆಯಲ್ಲಿ ಮಂಡಿಸಿ ಸಭೆಯ ಅಂಗೀಕಾರವನ್ನು ಪಡೆದ ನಂತರ ಮಾಡಬೇಕಾಗುತ್ತದೆ.

(5) ಮೂಡಿಗೆರೆ ತಾಲ್ಲೂಕಿನ ಕಳಸಾದಲ್ಲಿ ಕುಡಿಯುವ ನೀರಿನ ತೊಂದರೆ ಕುರಿತು.

ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಅಧ್ಯಕ್ಷರೇ, ಮೂಡಿಗೆರೆ ತಾಲ್ಲೂಕಿನ ಕಳಸಾ ಮಂಡಲ ಪಂಚಾಯಿತಿಗೆ ಸೇರಿದ ಕಳಸಕ್ಕೆ ಕುಡಿಯುವ ನೀರಿನ ಯೋಜನೆ, 1979ರಲ್ಲಿ 22 ಲಕ್ಷಕ್ಕೆ ಮಂಜೂರಾಗಿದ್ದರೂ ಕಳಸದ ಜನರಿಗೆ ಸರಿಯಾಗಿ ಕುಡಿಯುವ ನೀರು ಒದಗಿಸಲಾಗುತ್ತಿಲ್ಲ.

ಈಗ ಕಳಸ ಹೋಬಳಿ ಕೇಂದ್ರವಾಗಿದೆ. ಜನಸಂಖ್ಯೆ ಈಗ 9 ಸಾವಿರಕ್ಕೂ ಹೆಚ್ಚಾಗಿರುತ್ತದೆ. ಇರುವ ವ್ಯವಸ್ಥೆ ಸರಿಯಾಗಿಲ್ಲದೆ ಆಗಾಗ ಪಂಪ್ ಸೋರಿಹೋಗಿ ವಾರಗಟ್ಟಲೆ ಜನರಿಗೆ ನೀರು ದೊರೆಯದೆ ಪರಿತಾಪ ಪಡುವಂತಾಗಿದೆ. ಕೂಡಲೇ ಈ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಕಳಸ ಗ್ರಾಮದ ಜನಸಂಖ್ಯೆಯು 1981ನೇ ಇಸವಿಯ ಜನಗಣತಿಯಂತೆ 9,668 ಇದ್ದು ಈಗಿನ ಜನಸಂಖ್ಯೆಯು ಸುಮಾರು 12,000 ಕ್ಕೂ ಮೇಲ್ಪಟ್ಟಿದೆ. ಈಗಿರುವ ನೀರು ಸರಬರಾಜು ಯೋಜನೆ ಈ 1980 ರಲ್ಲಿ 12 ಲಕ್ಷ ರೂಪಾಯಿಗಳಿಗೆ ಮಂಜೂರಾಗಿದ್ದು ಅದರ ಪ್ರಕಾರ ಈ ಗ್ರಾಮಕ್ಕೆ ಸಾಕಷ್ಟು ನೀರು ಸರಬರಾಜು ಆಗುತ್ತಿಲ್ಲ. ಅಲ್ಲದೆ, ಈಗಿರುವ ೪೦ ಅಶ್ವ ಶಕ್ತಿಯ ಪಂಪುಗಳು ಕೂಡ ಕೆಟ್ಟಿದ್ದು ಅದರಲ್ಲಿ ಒಂದನ್ನು ಈಗಾಗಲೇ ರಿಪೇರಿ ಮಾಡಿ ನೀರು ಸರಬರಾಜಿನ ವ್ಯವಸ್ಥೆ ಮಾಡಲಾಗಿದೆ. ಇನ್ನು ಹೊಸದಾಗಿ ಒಂದು ಪಂಪುಸೆಟ್ಟನ್ನು ಕೊಳ್ಳಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದ್ದು ಅದನ್ನು ಅಳವಡಿಸಿದ ನಂತರ ಈ ನೀರಿನ ಸರಬರಾಜು ಸುಧಾರಿಸಲಾಗುವುದು.

ಈ ಗ್ರಾಮದ ನೀರು ಸರಬರಾಜು ಅಭಿವೃದ್ಧಿ ಯೋಜನೆಗೆ ಸುಮಾರು 14-15 ಲಕ್ಷ ರೂಪಾಯಿಗಳು ಬೇಕಾಗಿದ್ದು ಈ ಬಗ್ಗೆ ವಿವರವಾದ ಅಂದಾಜು ತಯಾರಿಸಿ ಪಡೆದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

(6) ಮೈಸೂರು ನಗರದ ಸುತ್ತಮುತ್ತಲಿರುವ ಯಾವುದಾದರೂ ಪ್ರದೇಶವನ್ನು "ಹಸಿರು ಪಟ್ಟಿ" ವಲಯವೆಂದು ಸರ್ಕಾರದವರು ಗುರುತಿಸಿರುವರೇ ಎಂಬುದರ ಬಗ್ಗೆ ಕುರಿತು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಮೈಸೂರು ನಗರದ ಸುತ್ತಮುತ್ತಲಿರುವ ಯಾವುದಾದರೂ ಪ್ರದೇಶವನ್ನು "ಹಸಿರು ಪಟ್ಟಿ" ವಲಯವೆಂದು ಸರ್ಕಾರದವರು ಗುರುತಿಸಿದ್ದಾರೆಯೇ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ (ಕಾನೂನು ಮಂತ್ರಿಗಳು) (ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರ ಪರವಾಗಿ) : ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ವಯ ಮೈಸೂರು ನಗರಕ್ಕೆ ದಿನಾಂಕ 20-6-1966 ರಂದು ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿತ್ತು.

ಈಗ ಸರಕಾರದಿಂದ 23-9-1981 ರಂದು ಅಂತಿಮ ಅನುಮೋದನೆಯಾದ ವ್ಯಾಪಕ ಅಭಿವೃದ್ಧಿ ಯೋಜನೆಯು ಜಾರಿಯಲ್ಲಿದೆ. ಈ ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ